ಆ) ಬಸ್ಸುಗಳನ್ನು ಸರಿಯಾದ ವೇಳಾಪಟ್ಟಿ ಅನ್ವಯವಾಗಿ ಕಾರ್ಯಾಚರಣೆ ಮಾಡಲು ಚಾಲಕ ಮತ್ತು ನಿರ್ವಾಹಕರ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ತೊಂದರೆ ನಿವಾರಣೆಗೆ ಕ್ರಮಕೈಗೊಂಡಿದೆ.

ಇ) ಈಗಾಗಲೇ ಈ ಸಂಬಂಧದ ಬಗ್ಗೆ ಕ್ರಮ ಕೈಗೊಂಡು ವ್ಯವಸ್ಥಿತವಾಗಿ ಬಸ್ ಸಂಚಾರ ಮಾಡಲಾಗಿದೆ.

ರಾಜ್ಯ ರಸ್ತೆ ಸಾರಿಗೆ ಬಸ್ಸಿನ ದರಗಳ ಪರಿಷ್ಕರಣೆ.

126. ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸಿನ ದರಗಳನ್ನು ಪರಿಷ್ಕರಿಸಲಾಗುವುದೇ ?

ಆ) ದರಗಳನ್ನು ಪರಿಷ್ಕರಿಸಲು ಉಪಯೋಗಿಸುವ ಮಾನದಂಡವೇನು ?

ಇ) ಈಗ ವರಮಾನ ಸೋರಿಕೆಯನ್ನು ತಡೆಗಟ್ಟುವುದರ ಮೂಲಕ ಬಸ್ಸಿನ ಪ್ರಯಾಣ ದರವನ್ನು ಇಳಿಸಲು ಸರ್ಕಾರ ಪರಿಶೀಲಿಸುವುದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಮತ್ತು ಆ) ಪರಿಶೀಲಿಸಲಾಗುತ್ತಿದೆ.

ಇ) ವರಮಾನ ಸೋರಿಕೆಯನ್ನು ತಡೆಗಟ್ಟಿದರೂ ಏರುತ್ತಿರುವ ಬೆಲೆಗಳಿಂದಾಗಿ ಬಸ್ ದರಗಳನ್ನು ಇಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ನಗರ ಸಾರಿಗೆ ಖಾಸಗೀಕರಣ.

127. ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರ ಸಾರಿಗೆ ಹಾಗೂ ರಾಜ್ಯದ ಇನ್ನಿತರ ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಣ ಮಾಡುವ ಬಗ್ಗೆ ಸರ್ಕಾರದವರ ನಿಲುವೇನು ?

ಆ) ಖಾಸಗೀಕರಣ ಮಾಡಲು ಅನುಸರಿಸುವ ರೀತಿ ನೀತಿಗಳೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಮತ್ತು ಆ) ಪರಿಶೀಲನೆಯಲ್ಲಿದೆ.

ಬೆಂಗಳೂರು ನಗರಕ್ಕೆ 1992ರ ವರೆಗೆ ನೀಡಲಾದ ಸೀಮೆಎಣ್ಣೆ ಹಾಕರ್ಸ್ ಪರವಾನಗಿಗಳ ಸಂಖ್ಯೆ.

648. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಬೆಂಗಳೂರು ನಗರಕ್ಕೆ ಜನವರಿ 1991ರಿಂದ ಅಕ್ಟೋಬರ್ 1992ರ ಕೊನೆಯವರೆಗೆ ನೀಡಲಾದ ಸೀಮೆಎಣ್ಣೆ ಹಾಕರ್ಸ್ ಪರವಾನಗಿಗಳ ಸಂಖ್ಯೆ ಎಷ್ಟು ?

2) ನೀಡಿದ ಪರವಾನಗಿಗಳ ವಿವರಗಳನ್ನು ಮತ ಕ್ಷೇತ್ರವಾರು ನೀಡುವುದು ?

3) ಈ ಪರವಾನಗೆಗಳನ್ನು ನೀಡಲು ಅನುಸರಿಸಲಾದ ಮಾನದಂಡ ಯಾವುದು ?

4) ಈ ಪರವಾನಗೆಗಳನ್ನು ಸಿರಿವಂತರು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

5) ಹಾಗಿದ್ದಲ್ಲಿ ಇಂತಹ ಪರವಾನಗೆಗಳನ್ನು ತೊಡೆದು ಹಾಕಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳಾವುವು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವೆಯರು):–

1) – ಇಲ್ಲ –

2) ಉದ್ಭವಿಸುವುದಿಲ್ಲ.

3) ಉದ್ಭವಿಸುವುದಿಲ್ಲ

4) ಉದ್ಭವಿಸುವುದಿಲ್ಲ

5) ಉದ್ಭವಿಸುವುದಿಲ್ಲ

ಬೆಂಗಳೂರು ನಗರದವರಿಗೆ ಸಮಾರಂಭ ವಿವಾಹ ಇತ್ಯಾದಿಗಳನ್ನು ಆಚರಿಸಲು ಸೀಮೆಎಣ್ಣೆ ಸರಬರಾಜು.

(647) ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವವರಿಗೆ ಸಮಾರಂಭ: ವಿವಾಹ ಇತ್ಯಾದಿಗಳನ್ನು ಆಚರಿಸಲು ಸೀಮೆಎಣ್ಣೆಯನ್ನು ಸರ್ಕಾರವು ಸರಬರಾಜು ಮಾಡುತ್ತಿದೆಯೇ ?

ಆ) ಹಾಗಿರದಿದ್ದರೆ, ಇಂತಹ ಸಮಾರಂಭಗಳಿಗಾಗಿ ಸೀಮೆಎಣ್ಣೆಯನ್ನು ಹಾಕರ್ಸ್‌ಗಳಿಂದ ಕಾಳಸಂತೆಯಲ್ಲಿ ಜನರು ಖರೀದಿಸುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದರೆ, ಮುಕ್ತ ಮಾರುಕಟ್ಟೆಗೆ ಸ್ವಲ್ಪ ಪ್ರಮಾಣದ ಸೀಮೆಎಣ್ಣೆಯನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವೆಯರು):–

ಅ) ಹೌದು. ಮದುವೆ : ಸಮಾರಂಭಗಳಿಗಾಗಿ ಸ್ವಲ್ಪ ಪ್ರಮಾಣದ ಅಂದರೆ 25ರಿಂದ 50 ಲೀಟರ್ ಸೀಮೆಎಣ್ಣೆ ಪರ್ಮಿಟ್‌ಗಳನ್ನು ನೀಡಲಾಗುತ್ತಿದೆ.

ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಸೀಮೆಎಣ್ಣೆ ಕೇಂದ್ರ ಸರಕಾರದಿಂದ ಹಂಚಲ್ಪಡುವ ನಿಯಂತ್ರಿತ ವಸ್ತುವಾಗಿದೆ. ಮುಕ್ತ ಮಾರುಕಟ್ಟೆಯಲ್ಲಿ ಇದನ್ನು ಮಾರುವಂತಿಲ್ಲ.